ನಿನ್ನ ಹಾಗೆ ಕೇಳಿದರೆ? ಎಂದು ಕೇಳಿದವಳನ್ನು ಮಾತಿನ ಬಾಣಗಳಿಂದ ಯಾವ ಪರಿ ಹಣ್ಣು ಮಾಡಿದನೆಂದರೆ ಸುಸ್ತಾಗಿದ್ದ ಸಾವನಿ 'ಸಾರಿ' ಎಂದು ಕೇಳಿದ ಮೇಲೆಯೇ ಮಲಗಲು ಬಿಟ್ಟಿದ್ದ. ದಿನಕಳೆದಂತೆ ರಾಜೀವನ ಮುಖ ಮತ್ತು ಮುಖವಾಡ ಎರಡೂ ಅರ್ಥವಾಗಿದ್ದವು. ಸಾರ್ವಜನಿಕ ಲೋಕದ ರಾಜೀವ ವಿಚಾರವಾದಿ, ರಾಜ್ಯಮಟ್ಟದಲ್ಲಿ ಹೆಸರಾದ ಲೇಖಕ, ಯಾವುದೇ ಚಳವಳಿಯಲ್ಲಿ ಮುಂದೆ ಇರುವವ, ತರುಣ ತರುಣಿಯರ ಗುಂಪಿನ ಕೇಂದ್ರ. ಆದರೆ, ಖಾಸಗಿ ಲೋಕದ ಪತಿ ರಾಜೀವ ಅಪಾರ ಆತ್ಮನ್ಯೂನತೆ, ಅನುಮಾನದಿಂದ ಬಳಲುತ್ತಿದ್ದವ. ಹೆಂಡತಿಯ ವಯಸ್ಸು, ನೃತ್ಯ, ಸೌಂದರ್ಯ, ಮೈಮಾಟ ಎಲ್ಲಕ್ಕಿಂತ ಮಿಗಿಲಾಗಿ ಅವಳ ಆತ್ಮವಿಶ್ವಾಸವನ್ನು ಕಂಡರೆ ಹೆದರುತ್ತಿದ್ದವ, ಆ ಕಾರಣಕ್ಕಾಗಿಯೇ ಅದನ್ನು ತುಳಿಯುತ್ತಿದ್ದವ. ಮೊದಮೊದಲು ಅವನೊಂದಿಗೆ ಚರ್ಚಿಸಲು, ಅರ್ಥಮಾಡಿಸಲು ಸಾವನಿ ಪ್ರಯತ್ನಿಸಿದ್ದಳು. ಆದರೆ, ದನಿ ಏರಿಸದೆಯೇ ಗಂಟೆಗಟ್ಟಲೆ ತಣ್ಣನೆಯ ಕ್ರೌರ್ಯದಲ್ಲಿ ವಾದ ಮಂಡಿಸಬಲ್ಲ ಗಂಡನ ಆಯುಧಗಳೆದುರು ಜೋರಾಗಿ ಮಾತಾಡಿ, ಮಾತಾಡಿ ಇವಳು ಸೋತಿದ್ದಳು. ಅವಳದು ಅಂತರ್ಜಾತಿ ವಿವಾಹ. ಮನೆಯವರನ್ನೆಲ್ಲಾ ಎದುರಿಸಿ, ತೊರೆದು ಬಂದು ರಾಜೀವನನ್ನು ಮದುವೆಯಾಗಿದ್ದಳು. ಉತ್ತರ ಕರ್ನಾಟಕದ ಹಳ್ಳಿಯೊಂದರ ಮೂಲೆಯಿಂದ ಬಂದು ತನಗಾಗಿ ಒಂದು ಹೆಸರು ಸಂಪಾದಿಸಿಕೊಂಡಿದ್ದ ಸಾವನಿ ಆಧುನಿಕ ಆತ್ಮವಿಶ್ವಾಸದ ಮಹಿಳೆಯ ಮುಖವಾಗಿ ಬಿಂಬಿತಳಾಗಿದ್ದಳು. ಖಾಸಗಿ ಜೀವನದ ಈ ಸೋಲು ಮತ್ತು ರಾಜೀವನನ್ನು ಗುರುತಿಸುವಲ್ಲಿ ಅವಳಿಂದ ಆದ ಸೋಲು ಅವಳ ಆತ್ಮವಿಶ್ವಾಸವನ್ನೇ ಹುಡಿಗೊಳಿಸಿತ್ತು. ಹಾಗೆಂದು ಗಂಡನನ್ನು ಬಿಟ್ಟು ಹೊರಡುವುದು ಅವಳು ಧಿಕ್ಕರಿಸಿ ಬಂದ ಮನೆಯವರು, ಊರಿನವರ ಮುಂದೆ ಎಡವಿ ಬಿದ್ದಂತಾಗುತ್ತಿತ್ತು. ಮನೆಯವರನ್ನೆಲ್ಲಾ ಕಳೆದುಕೊಂಡ ಅವಳಿಗೆ ಈಗ ಈ ಸಂಬಂಧವನ್ನೂ ತೊರೆದುಹೋಗುವುದು ಕಷ್ಟವಾಗಿತ್ತು. ಈ ತಿಕ್ಕಾಟದಲ್ಲಿ ದಿನಕಳೆದಂತೆಲ್ಲಾ ಅವಳು ಒರಟಾಗುತ್ತಾ, ಶಿಲೆಯಾಗುತ್ತಾ ಸಾಗಿದ್ದಳು. ಈಗೀಗಂತೂ ದಿನನಿತ್ಯ ಅನುಮಾನದ ಪ್ರಶ್ನೆಗಳು, ಕೊಂಕು ಮಾತುಗಳು. ಯಾವುದೇ ಕಾರಣಕ್ಕೂ ಅವಳು ಮೊಬೈಲ್ ಲಾಕ್ ಮಾಡುವಂತಿಲ್ಲ. ರಾಜೀವ ಯಾವಾಗ ಫೋನ್ ಮಾಡಿದರೂ ಕೂಡಲೇ ತೆಗೆಯಬೇಕು. ಅವಳು ಎಲ್ಲೇ ಹೋಗಲಿ ಅದರ ಮಾಹಿತಿ ಅವನಿಗೆ ಕೊಟ್ಟೇ ಹೋಗಬೇಕು. ಇಬ್ಬರ ನಡುವಿನ ಸೆಕ್ಸ್ ಸಹ ಮದುವೆಯ ಒಂದು ಒಪ್ಪಂದದ ಭಾಗ ಎನ್ನುವಂತೆ ಮುಗಿಯುತ್ತಿತ್ತೇ ಹೊರತು ಯಾವುದೇ ಬೆಚ್ಚಗಿನ ಆರ್ದ್ರತೆಯನ್ನು ಹುಟ್ಟಿಸುತ್ತಲೂ ಇರಲಿಲ್ಲ, ಉಳಿಸಿ ಹೋಗುತ್ತಲೂ ಇರಲಿಲ್ಲ. ದಿನಕಳೆದಂತೆ ಸಾವನಿ ಕೊರಡಾಗುತ್ತಿದ್ದಳು, ನಿನ್ನ ಜೊತೆ ಮಲಗುವುದು ಶವದ ಜೊತೆ ಮಲಗಿದಂತಾಗುತ್ತದೆ ಎಂದು ಹಿಂದಿನ ದಿನ ತಾನೇ ರಾಜೀವ ಅಣಕಿಸಿದ್ದ. ವಾಪಸ್ ಬಂದು ಕೂತಾಗ ವಿಭಾವರಿ ಪ್ರಶ್ನಾರ್ಥಕವಾಗಿ ನೋಡಿದಳು. 'ಇನ್ನೊಂಚೂರು ವೈನ್ ಬೇಕಲ್ಲಾ ವಿಭಾ' ಎಂದು ಸಾವನಿ ಹೇಳಿದಾಗ, 'ಅಭೀ ರೆಡಿ' ಎಂದು ಚಿಮ್ಮುತ್ತಾ ಹೋದಳು.

ವಿಭಾವರಿ ಎಂದರೆ ಎಲ್ಲರಿಗೂ ಇಷ್ಟ. ದುಂಡು ಮುಖ, ಹೊಳೆಯುವ ಕೆನ್ನೆಗಳು, ಕ್ಷಣ ನಿಂತಲ್ಲಿ ನಿಲ್ಲದೆ ಎಲ್ಲವನ್ನೂ ಬೆದಕುವ, ಒಳಗನ್ನು ಕೆದಕುವ ಕಣ್ಣುಗಳು, ಗುಂಗುರು ಕೂದಲು, ಬೈತಲೆಯ ಬಲಭಾಗದಲ್ಲಿ ಒಂದು ಜೊಂಪೆಗೆ ಮಾತ್ರ ಹಾಕಿಸಿದ್ದ ಬಂಗಾರದ ಬಣ್ಣ, ನಡೆಯುವುದಕ್ಕೆ ಬರುವುದಿಲ್ಲವೇನೋ ಎನ್ನುವಂತೆ ಸದಾ ಚಿಮ್ಮುತ್ತಲೇ ಹೋಗುತ್ತಿದ್ದಳು. ಚಾಮರಾಜನಗರದಾಚೆಯ ಒಂದು ಹಳ್ಳಿಯಿಂದ ಬಂದವಳು. ಇವಳು ಡಿಗ್ರಿ ಮುಗಿಸುವವರೆಗೂ ಅವಳ ಹಳ್ಳಿಗೆ ಬಸ್ ಸಹ ಇರಲಿಲ್ಲ. ಹೈಸ್ಕೂಲಿನಿಂದಲೇ ಹಾಸ್ಟೆಲ್‌ಗಳಲ್ಲಿ ಬೆಳೆದ ಅವಳಿಗೆ ಜವಾಬ್ದಾರಿ ತೆಗೆದುಕೊಳ್ಳುವುದು, ತನ್ನನ್ನು ತಾನು ನೋಡಿಕೊಳ್ಳುವುದು ಸ್ವಭಾವದ ಭಾಗವೇ ಆಗಿಹೋಗಿತ್ತು. ಬೆಂಗಳೂರಿಗೆ ಬಂದ ಸುಮಾರು ದಿನಗಳು ಪಟ್ಟಣದ ಹುಡುಗಿಯರ ನಯ, ಕಿವಿಯನ್ನು ಮೃದುವಾಗಿ ಸ್ಪರ್ಶಿಸಿದಂತೆ ಆಡುವ ಮಾತು, ಇಂಗ್ಲಿಷ್ ಎಲ್ಲವೂ ಗಾಬರಿ ಹುಟ್ಟಿಸುತ್ತಿತ್ತು. ಆದರೆ, ವಿದ್ಯಾರ್ಥಿ ದೆಸೆಯಿಂದಲೇ